ಕರ್ನಾಟಕ ಸರ್ಕಾರ

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ ಮಲ್ಲೇಶ್ವರಂ, ಬೆಂಗಳೂರು-560003.

ಸಂಖ್ಯೆ:ಎಸ್1/ವಾ.ಪ.ಅ.ಜನವರಿ-2024/36/2023-24 ದಿನಾಂಕ: 29.11.2023

## -: ಅಧಿಸೂಚನೆ :-

ವಿಷಯ: ಜನವರಿ-2024ರ ಮಾಹೆಯಲ್ಲಿ ನಡೆಯಲಿರುವ ವಾಣಿಜ್ಯ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ:1.ಆಯುಕ್ತರು, ಸಾ.ಶಿ.ಇಲಾಖೆ ಮತ್ತು ಅಧ್ಯಕ್ಷರು, ಕ.ಪ್ರೌ.ಶಿ.ಪ.ಮಂಡಲಿ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 02.01.2019ರಂದು ನಡೆದ ಸಭಾ ನಡಾವಳಿ.

2.ಸರ್ಕಾರದ ಆದೇಶ ಸಂಖ್ಯೆ :ಇಡಿ 236 ಎಸ್‌ಎಲ್‌ಬಿ 2018 ದಿನಾಂಕ.24.01.2019

3.ಸರ್ಕಾರದ ಆದೇಶ ಸಂಖ್ಯೆ :ಇಡಿ4 ಎಲ್‌ಸಿಇ 2002, ಬೆಂಗಳೂರು ದಿನಾಂಕ:28.01.2003

4.ಮಾನ್ಯ ನಿರ್ದೇಶಕರು ಇತರೆಪರೀಕ್ಷೆಗಳು ರವರ ಸುತ್ತೋಲೆ ಸಂಖ್ಯೆ:ಎಸ್1.ವಾ.ಪ.ನೋಂ/23/2004-05. ದಿನಾಂಕ:19.01.2005.

*********************

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿಯ ವತಿಯಿಂದ 2024 ರ ಜನವರಿ ಮಾಹೆಯಲ್ಲಿ ವಾಣಿಜ್ಯ ಪರೀಕ್ಷೆಯನ್ನು ನಡೆಸಲಾಗುತ್ತದೆ. ಸದರಿ ಪರೀಕ್ಷೆಗೆ ರಾಜ್ಯದ ಮಾನ್ಯತೆ ಪಡೆದ ವಾಣಿಜ್ಯ ಸಂಸ್ಥೆಗಳಲ್ಲಿ ಅಭ್ಯಾಸ ಮಾಡುತ್ತಿರುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಪರೀಕ್ಷೆಗೆ ಹಾಜರಾಗಲು ಅಭ್ಯರ್ಥಿಗಳ ಅರ್ಜಿಗಳನ್ನು ಸಂಬಂಧಿಸಿದ ವಾಣಿಜ್ಯ ಸಂಸ್ಥೆಗಳ ಮುಖಾಂತರ ಸಲ್ಲಿಸಬೇಕಿದೆ. ವಾಣಿಜ್ಯ ಸಂಸ್ಥೆಗಳ ಮುಖ್ಯಸ್ಥರು ತಮ್ಮ ಸಂಸ್ಥೆಯಿಂದ ಪರೀಕ್ಷೆಗೆ ಹಾಜರಾಗುವ ಅರ್ಹ ಅಭ್ಯರ್ಥಿಗಳ ವಿವರಗಳನ್ನು ಮಂಡಲಿಯ ಜಾಲತಾಣ **https://kseab.karnataka.gov.in** ನ ಇತರೆ ಪರೀಕ್ಷೆಗಳ Portal ನಲ್ಲಿ commerce examination ನ Institute login ಮೂಲಕ Upload ಮಾಡಲು ಸೂಚಿಸಿದೆ.

## ವಾಣಿಜ್ಯ ಪರೀಕ್ಷೆ ತೆಗೆದುಕೊಳ್ಳಲು ಅಭ್ಯರ್ಥಿಗಳಿಗಿರಬೇಕಾದ ಅರ್ಹತೆಗಳು:-

- ಆಂಗ್ಲ ಅಥವಾ ಕನ್ನಡ ಬೆರಳಚ್ಚು ಪ್ರಥಮ ದರ್ಜೆ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಸರ್ಕಾರಿ ಆದೇಶ ಸಂಖ್ಯೆ: ಇಡಿ4 ಎಲ್‌ಸಿಇ 2002, ಬೆಂಗಳೂರು ದಿನಾಂಕ: 28.01.2003ರಂತೆ ಎಸ್.ಎಸ್.ಎಲ್.ಸಿ./ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣ/ಅನುತ್ತೀರ್ಣರಾಗಿರಬೇಕು.
- ಕನ್ನಡ ಹಾಗೂ ಆಂಗ್ಲ ಬೆರಳಚ್ಚು ಪ್ರೌಢದರ್ಜೆ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳು ಪ್ರಥಮ ದರ್ಜೆ ಉತ್ತೀರ್ಣಗೊಂಡು 10 ತಿಂಗಳು ಪೂರ್ಣಗೊಂಡಿರಬೇಕು. ಹಾಗೂ ಎಸ್.ಎಸ್.ಎಲ್.ಸಿ/ತತ್ಸಮಾನ ಪರೀಕ್ಷೆಯಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಿರಬೇಕು
- ಆಂಗ್ಲ ಶೀಘ್ರಲಿಪಿ ಪ್ರಥಮದರ್ಜೆ ಪರೀಕ್ಷೆ ತೆಗೆದುಕೊಳ್ಳಲು ಎಸ್.ಎಸ್.ಎಲ್.ಸಿ/ತತ್ಸಮಾನ ಪರೀಕ್ಷೆಯಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಿರಬೇಕು.
- ಆಂಗ್ಲ ಶೀಘ್ರಲಿಪಿ ಮದ್ಯಮ ದರ್ಜೆ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳು ಪ್ರಥಮ ದರ್ಜೆ ಉತ್ತೀರ್ಣಗೊಂಡು 06 ತಿಂಗಳು ಪೂರ್ಣಗೊಂಡಿರಬೇಕು.
- ಆಂಗ್ಲ ಶೀಘ್ರಲಿಪಿ ಪ್ರೌಢದರ್ಜೆ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳು ಮಧ್ಯಮ ದರ್ಜೆ ಉತ್ತೀರ್ಣಗೊಂಡು 06 ತಿಂಗಳು ಪೂರ್ಣಗೊಂಡಿರಬೇಕು.
- ಆಂಗ್ಲ ಶೀಘ್ರಲಿಪಿ ಪ್ರವೀಣ ದರ್ಜೆ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳು ಪ್ರೌಢದರ್ಜೆ ಉತ್ತೀರ್ಣಗೊಂಡು 10 ತಿಂಗಳು ಪೂರ್ಣಗೊಂಡಿರಬೇಕು.
- ಕನ್ನಡ ಶೀಘ್ರಲಿಪಿ ಪ್ರಥಮ ದರ್ಜೆ ಪರೀಕ್ಷೆ ತೆಗೆದುಕೊಳ್ಳಲು ಎಸ್.ಎಸ್.ಎಲ್.ಸಿ/ತತ್ಸಮಾನ ಪರೀಕ್ಷೆಯಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಿರಬೇಕು ಹಾಗೂ 10 ತಿಂಗಳ ಅವಧಿಯ ತರಬೇತಿ ಪೂರ್ಣಗೊಂಡಿರಬೇಕು.
- ಕನ್ನಡ ಶೀಘ್ರಲಿಪಿ ಪ್ರೌಢದರ್ಜೆ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳು ಪ್ರಥಮ ದರ್ಜೆ ಉತ್ತೀರ್ಣಗೊಂಡು 10 ತಿಂಗಳು ಪೂರ್ಣಗೊಂಡಿರಬೇಕು.

- ಕನ್ನಡ ಶೀಘ್ರಲಿಪಿ ಪ್ರವೀಣ ದರ್ಜೆ ತೆಗೆದುಕೊಳ್ಳುವ ಅಭ್ಯರ್ಥಿಗಳು ಪ್ರೌಢದರ್ಜೆಯಲ್ಲಿ ಉತ್ತೀರ್ಣಗೊಂಡು 10 ತಿಂಗಳು ಪೂರ್ಣಗೊಂಡಿರಬೇಕು.
- ಆಂಗ್ಲ ಮತ್ತು ಕನ್ನಡ ಬೆರಳಚ್ಚು ಪರೀಕ್ಷೆಗಳಿಗೆ ತಂಡಗಳನ್ನು(ಬ್ಯಾಚ್) ಆಯ್ಕೆ ಮಾಡುವಾಗ ಪ್ರಥಮ ದರ್ಜೆಗೆ ಎ,ಬಿ,ಸಿ,ಡಿ,ಇ ತಂಡಗಳೆಂದೂ, ಪ್ರೌಢದರ್ಜೆಗೆ ಎ,ಬಿ,ಸಿ,ಡಿ ತಂಡಗಳೆಂದು ವಿಂಗಡಿಸಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ಸ್ಪಷ್ಟವಾಗಿ ನಮೂದಿಸಬೇಕು. **ಯಾವುದೇ ಕಾರಣಕ್ಕೂ ತಂಡ ಬದಲಾವಣೆಗೆ ಅವಕಾಶವಿರುವುದಿಲ್ಲ.**
- ಆಂಗ್ಲ ಶೀಘ್ರಲಿಪಿ ಪ್ರವೀಣ ದರ್ಜೆ(ವಿಷಯ ಸಂಕೇತ 11 XYZ) ಮತ್ತು ಕನ್ನಡ ಶೀಘ್ರಲಿಪಿ ಪ್ರವೀಣ ದರ್ಜೆ (ವಿಷಯ ಸಂಕೇತ 16 XYZ) ಪರೀಕ್ಷೆಗಳನ್ನು ರಾಜ್ಯದ ಬೆಂಗಳೂರಿನ ಒಂದು ಕೇಂದ್ರದಲ್ಲಿ ಮಾತ್ರ ನಡೆಸಲಾಗುತ್ತದೆ
- ಮುದ್ರಣ ಪರೀಕ್ಷೆಗಳಿಗೆ ಸಂಬಂಧಿಸಿದಂತೆ AN017 ಸರ್ಕಾರಿ ಮುದ್ರಣಾಲಯ ಬೆಂಗಳೂರು. EE014 ಸರ್ಕಾರಿ ಮುದ್ರಣಾಲಯ ಮೈಸೂರು ಹಾಗೂ MM018 ಸರ್ಕಾರಿ ಮುದ್ರಣಾಲಯ ಧಾರವಾಡ ಇಲ್ಲಿ ಅರ್ಜಿಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.
- ಮುದ್ರಣ ಪರೀಕ್ಷೆಗಳನ್ನು ಕೇಂದ್ರ ಸರ್ಕಾರಿ ಮುದ್ರಣಾಲಯ, ಮೈಸೂರು ರಸ್ತೆ, ಆರ್.ವಿ ಕಾಲೇಜು ಅಂಚೆ, ಬೆಂಗಳೂರು (03AS) ಈ ಪರೀಕ್ಷಾ ಕೇಂದ್ರದಲ್ಲಿ ಮಾತ್ರ ನಡೆಸಲಾಗುತ್ತದೆ.
- ವಾಣಿಜ್ಯ ಸಂಸ್ಥೆಗಳ ಮಾನ್ಯತೆ ನವೀಕರಣ ಕಡ್ಡಾಯವಾಗಿ ವಿಭಾಗಿಯ ಕಾರ್ಯದರ್ಶಿಗಳಿಂದ ಆಗಿರಬೇಕು ಹಾಗೂ ವಾರ್ಷಿಕ ನವೀಕರಣ ಶುಲ್ಕ ರೂ.205-00 ಗಳನ್ನು ಆನ್‌ಲೈನ್ ಮೂಲಕ ಪಾವತಿಸಬೇಕು.
- 2003ಕ್ಕಿಂತಲೂ ಹಿಂದೆ ವಾಣಿಜ್ಯ ಪರೀಕ್ಷೆಯ ಪ್ರಥಮ ದರ್ಜೆಯಲ್ಲಿ ಉತ್ತೀರ್ಣಗೊಂಡಿರುವ ಅಭ್ಯರ್ಥಿಗಳು ಪ್ರೌಢದರ್ಜೆ ಪರೀಕ್ಷೆ ತೆಗೆದುಕೊಳ್ಳಬೇಕಾಗಿದ್ದಲ್ಲಿ ನೇರವಾಗಿ ಮಂಡಲಿಯನ್ನು ಸಂಪರ್ಕಿಸಬೇಕು.

## ಫಲಿತಾಂಶ ಉತ್ತಮಪಡಿಸಿಕೊಳ್ಳುವಿಕೆ

- ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಬಯಸುವ ಅಭ್ಯರ್ಥಿಗಳು ದಿನಾಂಕ:26.10.2023 ರಲ್ಲಿ ಮಂಡಲಿಯ ಜಾಲತಾಣದಲ್ಲಿ ಪ್ರಕಟಿಸಿದಂತೆ ಅನುಮತಿ ಪಡೆದುಕೊಂಡಿರಬೇಕು.
- ವಾಣಿಜ್ಯ ಸಂಸ್ಥೆಗಳ ಮೂಲಕ ಶುಲ್ಕ ರೂ.100/- ಗಳನ್ನು ದಿನಾಂಕ:15.11.2023 ರೊಳಗೆ ಪಾವತಿಸಿ ಮೂಲ ಅಂಕಪಟ್ಟಿಗಳನ್ನು ಸಲ್ಲಿಸಿ ಮಂಡಲಿಯಿಂದ ಅನುಮತಿ ಪತ್ರವನ್ನು ಪಡೆದಿರುವ ಅಭ್ಯರ್ಥಿಗಳು ಒಂದು ಬಾರಿಗೆ ಮಾತ್ರ ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಅರ್ಹರಾಗಿರುತ್ತಾರೆ.
- ಮಂಡಲಿಯಿಂದ ಅನುಮತಿ ಪಡೆದ ಅಭ್ಯರ್ಥಿಗಳು ವಾಣಿಜ್ಯ ಸಂಸ್ಥೆಯ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು.
- ಅರ್ಜಿ ಸಲ್ಲಿಸುವಾಗ ನಿಗದಿತ ಕಾಲಂನಲ್ಲಿ ಮಂಡಲಿ ನೀಡಿರುವ ಅನುಮತಿ ಪತ್ರದ ಸಂಖ್ಯೆಯನ್ನು ನಮೂದಿಸಬೇಕು.
- ಅಭ್ಯರ್ಥಿಯು ಈ ಹಿಂದೆ ಪರೀಕ್ಷೆ ಬರೆದ ಪರೀಕ್ಷಾ ಕೇಂದ್ರದಲ್ಲಿಯೇ ಪರೀಕ್ಷೆ ತೆಗೆದುಕೊಳ್ಳಬೇಕು. ಪರೀಕ್ಷಾ ಕೇಂದ್ರ ಬದಲಾವಣೆಗೆ ಅವಕಾಶ ಇರುವುದಿಲ್ಲ.
- ಸದರಿ ಪರೀಕ್ಷೆಯಲ್ಲಿ ಫಲಿತಾಂಶ ಉತ್ತಮವಾಗದಿದ್ದ ಪಕ್ಷದಲ್ಲಿ ಹಿಂದಿನ ಫಲಿತಾಂಶವನ್ನು ಪರಿಗಣಿಸಲಾಗುವುದು ಫಲಿತಾಂಶ ಉತ್ತಮಗೊಳ್ಳದ ಅಭ್ಯರ್ಥಿಗಳು ತಮ್ಮ ಸಂಸ್ಥೆಯ ಮುಖಾಂತರ ಈ ಹಿಂದೆ ಅನುಮತಿ ಪಡೆಯುವ ಸಂದರ್ಭದಲ್ಲಿ ಸಲ್ಲಿಸಿದ್ದ ಮೂಲ ಅಂಕಪಟ್ಟಿಗಳನ್ನು ಕಡ್ಡಾಯವಾಗಿ ಹಿಂಪಡೆಯಬೇಕು.

## ಖಾಸಗಿ ಅಭ್ಯರ್ಥಿಗಳು

- ಖಾಸಗಿ ಅಭ್ಯರ್ಥಿಗಳಾಗಿ ಅರ್ಜಿ ಸಲ್ಲಿಸುತ್ತಿರುವ ಅಭ್ಯರ್ಥಿಗಳು ಈಗಾಗಲೇ ದಿನಾಂಕ:26.10.2023 ರಲ್ಲಿ ಮಂಡಲಿಯ ಜಾಲತಾಣದಲ್ಲಿ ಪ್ರಕಟಿಸಿದಂತೆ ಅನುಮತಿ ಪಡೆದುಕೊಂಡಿರಬೇಕು.
- ಅಭ್ಯರ್ಥಿಗಳು ಯಾವುದಾದರೂ ವಾಣಿಜ್ಯ ಸಂಸ್ಥೆಯ ಮೂಲಕ ನೋಂದಣಿ ಶುಲ್ಕ ರೂ.180/- ಗಳನ್ನು ದಿನಾಂಕ;15.11.2023ರೊಳಗೆ ಪಾವತಿಸಿ ಮಂಡಲಿಯಿಂದ ನೋಂದಣಿ ಪ್ರಮಾಣ ಪತ್ರವನ್ನು ಪಡೆದಿರಬೇಕು. ಇಂತಹ ಅಭ್ಯರ್ಥಿಗಳು ಮಾತ್ರ ಖಾಸಗಿ ಅಭ್ಯರ್ಥಿಗಳಾಗಿ ವಾಣಿಜ್ಯ ಸಂಸ್ಥೆಗಳ ಮುಖಾಂತರ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

* ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ನಿಗದಿತ ಕಾಲಂನಲ್ಲಿ ಮಂಡಲಿ ನೀಡಿರುವ ಅನುಮತಿ ಪತ್ರದ ಸಂಖ್ಯೆಯನ್ನು ನಮೂದಿಸಬೇಕು.
* ಖಾಸಗಿ ಅಭ್ಯರ್ಥಿಗಳು ಜೂನಿಯರ್ ಪರೀಕ್ಷೆ ಉತ್ತೀರ್ಣರಾಗದೇ ನೇರವಾಗಿ ಪ್ರೌಢದರ್ಜೆ ಪರೀಕ್ಷೆ ತೆಗೆದುಕೊಳ್ಳುವಂತಿಲ್ಲ ಹಾಗೂ ಎರಡೂ ಪರೀಕ್ಷೆಗಳನ್ನು ಒಂದೇ ಬಾರಿ ತೆಗೆದುಕೊಳ್ಳಲು ಅವಕಾಶವಿಲ್ಲ.
* ಯಾವುದೇ ವಾಣಿಜ್ಯ ಸಂಸ್ಥೆಯವರು ಅನುಮತಿ ಪಡೆದಿರುವ ವಿಷಯಗಳನ್ನಲ್ಲದೇ ಬೇರೆ ವಿಷಯಗಳಲ್ಲಿ ಅಭ್ಯರ್ಥಿಗಳನ್ನು ಪರೀಕ್ಷೆಗೆ ಹಾಜರು ಪಡಿಸಿದ್ದು ಕಂಡುಬಂದಲ್ಲಿ ಮಂಡಲಿಯ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

## ಪರೀಕ್ಷಾ ವಿಷಯಗಳು:

| ಪರೀಕ್ಷಾ ವಿಷಯಗಳು | ಜನವರಿ-2024ರ ಅವಧಿಯಲ್ಲಿ ನಡೆಸಲಾಗುವ ವಾಣಿಜ್ಯ ಪರೀಕ್ಷೆಯ ವಿಷಯ ಸಂಕೇತ ಮತ್ತು ದರ್ಜೆಗಳು | |
|---|---|---|
| | ವಿಷಯ ಸಂಕೇತದ ಸಂಖ್ಯೆ | ದರ್ಜೆ |
| ಆಂಗ್ಲ ಮತ್ತು ಕನ್ನಡ ಬೆರಳಚ್ಚು | 03 XY, 08 XY | ಪ್ರೌಢ ದರ್ಜೆ |
| | 05 XY, 10 XY | ಪ್ರಥಮ ದರ್ಜೆ |
| ಆಂಗ್ಲ ಶೀಘ್ರಲಿಪಿ | 11 XYZ | ಪ್ರವೀಣ ದರ್ಜೆ |
| | 13 XYZ | ಪ್ರೌಢ ದರ್ಜೆ |
| | 14 XY | ಮಧ್ಯಮ ದರ್ಜೆ |
| | 15 XY | ಪ್ರಥಮ ದರ್ಜೆ |
| ಕನ್ನಡ ಶೀಘ್ರಲಿಪಿ | 16 XYZ | ಪ್ರವೀಣ ದರ್ಜೆ |
| | 18 XYZ | ಪ್ರೌಢದರ್ಜೆ |
| | 20 XY | ಪ್ರಥಮ ದರ್ಜೆ |
| ಮುದ್ರಣ ಪರೀಕ್ಷೆಗಳು | 31 XY, 33XY, 35XY, 37XY | ಪ್ರೌಢದರ್ಜೆ |
| | 32XY, 34XY, 36XY, 38XY | ಪ್ರಥಮ ದರ್ಜೆ |

## ವಿಷಯವಾರು ಪರೀಕ್ಷಾ ಶುಲ್ಕದ ವಿವರಗಳು

| ಕ್ರಸಂ | ವಿಷಯಗಳು | ಪ್ರಥಮದರ್ಜೆ | ಮಧ್ಯಮ ದರ್ಜೆ | ಪ್ರೌಢ ದರ್ಜೆ | ಪ್ರವೀಣ ದರ್ಜೆ |
|---|---|---|---|---|---|
| 1. | ಆಂಗ್ಲ ಮತ್ತು ಕನ್ನಡ ಬೆರಳಚ್ಚು | 390-00 | - | 430-00 | - |
| 2. | ಆಂಗ್ಲ ಶೀಘ್ರಲಿಪಿ | 430-00 | 456-00 | 468-00 | 624-00 |
| 3. | ಕನ್ನಡ ಶೀಘ್ರಲಿಪಿ | 430-00 | - | 468-00 | 624-00 |
| 4 | ಮುದ್ರಣ ಪರೀಕ್ಷೆಗಳು | 468-00 | - | 499-00 | - |

ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕದಿಂದ ವಿನಾಯಿತಿ ಇದ್ದು, ಅರ್ಜಿ ಶುಲ್ಕ ಮತ್ತು ಅಂಕಪಟ್ಟಿ ಶುಲ್ಕ, ಒಟ್ಟು ರೂ.10/-ಗಳನ್ನು ಪಾವತಿಸಬೇಕಾಗುತ್ತದೆ

## ನೆಫ್ಟ್ ಚಲನ್ ಹಾಗೂ ಅರ್ಜಿಗಳನ್ನು ಸಲ್ಲಿಸಲು ನಿಗದಿಗೊಳಿಸಿರುವ ದಿನಾಂಕಗಳ ವಿವರ

| ಕ್ರ.ಸಂ | ವಿವರ | ನಿಗದಿಪಡಿಸಿರುವ ದಿನಾಂಕ |
|---|---|---|
| 01 | ಪ್ರಥಮ ಮಾನ್ಯತೆ/ ಮಾನ್ಯತೆ ನವೀಕರಣ ಪತ್ರವನ್ನು ಅಪ್‌ಲೋಡ್ ಮಾಡುವುದು ಹಾಗೂ ನವೀಕರಣ ಶುಲ್ಕ ರೂ.205-00ಗಳನ್ನು ಆನ್‌ಲೈನ್ ಮೂಲಕ ಪಾವತಿಸಲು ನಿಗದಿಪಡಿಸಿದ ದಿನಾಂಕ | 06/12/2023 ರಿಂದ 22/12/2023 |
| 02 | ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರು ಪ್ರಥಮ ಮಾನ್ಯತೆ ಅಥವಾ ಮಾನ್ಯತೆ ನವೀಕರಣ ಪ್ರತಿಯನ್ನು ತಮ್ಮ ಲಾಗಿನ್‌ನಲ್ಲಿ ಆನ್‌ಲೈನ್ ಮೂಲಕ ಅನುಮೋದಿಸುವುದು. | 06/12/2023 |
| 03 | ಮಂಡಲಿ ಜಾಲತಾಣದಲ್ಲಿ ಸಂಸ್ಥೆಯ ಲಾಗಿನ್ ಮೂಲಕ ಅಭ್ಯರ್ಥಿಗಳ ಅರ್ಜಿಯನ್ನು ಅಪ್‌ಲೋಡ್ ಮಾಡುವ ದಿನಾಂಕ | 06/12/2023 ರಿಂದ 26/12/2023 |
| 04 | ಮಂಡಲಿ ಜಾಲತಾಣದಲ್ಲಿ ಸಂಸ್ಥೆಯ ಲಾಗಿನ್ ಮೂಲಕ ಅಭ್ಯರ್ಥಿಗಳ ಪರೀಕ್ಷಾ ಶುಲ್ಕವನ್ನು ಆನ್‌ಲೈನ್ ಮೂಲಕ ಶುಲ್ಕ ಪಾವತಿಸುವ ದಿನಾಂಕ | 27/12/2023 |
| 05 | ನಾಮಿನಲ್ ರೋಲ್, ಶುಲ್ಕ ಪಾವತಿಸಿದ ಚಲನ್‌ನ ಮೂಲ ಪ್ರತಿ ಹಾಗೂ ಸಂಬಂಧಿಸಿದ ಇತರೆ ದಾಖಲೆಗಳನ್ನು ಸಲ್ಲಿಸಿ ಡಯಟ್ ಲಾಗಿನ್‌ನಲ್ಲಿ ಉಪನಿರ್ದೇಶಕರು(ಅಭಿವೃದ್ಧಿ)ರವರು ಅನುಮೋದಿಸುವುದು. | 27/12/2023 ರಿಂದ 29/12/2023 |
| 06 | ನಾಮಿನಲ್ ರೋಲ್, ಶುಲ್ಕ ಪಾವತಿಸಿದ ಚಲನ್‌ನ ಮೂಲ ಪ್ರತಿ ಹಾಗೂ ಸಂಬಂಧಿಸಿದ ಇತರೆ ದಾಖಲೆಗಳನ್ನು ಉಪನಿರ್ದೇಶಕರು(ಅಭಿವೃದ್ಧಿ) ಮಂಡಲಿಗೆ ಸಲ್ಲಿಸುವುದು. | 30/12/2023 |

## ಶಾಲಾ ಸಂಕೇತ ನವೀಕರಣ ಶುಲ್ಕ ಪಾವತಿಸುವ ಹಾಗೂ ಮಾನ್ಯತೆ ನವೀಕರಣ ಪ್ರತಿ ಅಪ್‌ಲೋಡ್ ಮಾಡುವ ವಿಧಾನ

ಜನವರಿ 2024ರ ಮಾಹೆಯಲ್ಲಿ ನಡೆಯುವ ವಾಣಿಜ್ಯ ವಿಷಯಗಳ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಸಂಸ್ಥೆಗಳ ಮುಖ್ಯಸ್ಥರು ತಮ್ಮ Institute login ನಲ್ಲಿ ಸಂಸ್ಥೆಯ ಮಾನ್ಯತೆ/ಮಾನ್ಯತೆ ನವೀಕರಣ ಪ್ರತಿಯನ್ನು pdf ನಮೂನೆಯಲ್ಲಿ (within 1mb size) ಸ್ಕ್ಯಾನ್ ಮಾಡಿ Upload ಮಾಡುವುದು.

- ಶಾಲಾ ಸಂಕೇತ ನವೀಕರಣ ಶುಲ್ಕ ರೂ. 205-00ಗಳನ್ನು Institute login ನಲ್ಲಿ ಆನ್‌ಲೈನ್ ಮೂಲಕ ಪಾವತಿಸಲು ಅವಕಾಶ ಕಲ್ಪಸಿದ್ದು, Debit card/Credit card/Net Banking ಮೂಲಕ ಶುಲ್ಕ ಪಾವತಿಸಬೇಕಾಗಿರುತ್ತದೆ. (ಶುಲ್ಕ ಪಾವತಿಸಿದ ಬ್ಯಾಂಕ್ ಸಂದಾಯದ ರಶೀದಿಯಲ್ಲಿ Transaction Status ನಲ್ಲಿ Transaction Successful ಆಗಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು).
- ಮಾನ್ಯತೆ/ಮಾನ್ಯತೆ ನವೀಕರಣ ಪ್ರತಿಯನ್ನು Institute login ನಲ್ಲಿ Upload ಮಾಡಿ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರು ಅನುಮೋದಿಸಿದ ನಂತರವಷ್ಟೇ ಆನ್‌ಲೈನ್ ನಲ್ಲಿ ಪರೀಕ್ಷಾ ಅರ್ಜಿ ಸಲ್ಲಿಸಲು ಸಂಸ್ಥೆಗಳಿಗೆ ಅವಕಾಶ ಕಲ್ಪಿಸಲಾಗುತ್ತದೆ.

## 2024ರ ಜನವರಿ ಮಾಹೆಯಲ್ಲಿ ನಡೆಯುವ ವಾಣಿಜ್ಯ ಪರೀಕ್ಷೆಗೆ ಸಂಬಂಧಿಸಿದಂತೆ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರುಗಳ ಪಾತ್ರ

- ವಾಣಿಜ್ಯ ಸಂಸ್ಥೆಗಳಿಗೆ ಪ್ರಥಮ ಮಾನ್ಯತೆ ಅಥವಾ ಮಾನ್ಯತೆ ನವೀಕರಣದ ಸಕ್ಷಮ ಪ್ರಾಧಿಕಾರ ಸಂಬಂಧಪಟ್ಟ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರವರಾಗಿರುತ್ತಾರೆ.

- ಪ್ರಥಮ ಮಾನ್ಯತೆ ಅಥವಾ ಮಾನ್ಯತೆ ನವೀಕರಣ ಪ್ರತಿಯನ್ನು ಅನುಮೋದಿಸಲು ಸಂಬಂಧಪಟ್ಟ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರಿಗೆ Login ವ್ಯವಸ್ಥೆ ಕಲ್ಪಿಸಲಾಗಿದೆ.
- ಜನವರಿ-2024ರ ಮಾಹೆಯಲ್ಲಿ ನಡೆಯುವ ವಾಣಿಜ್ಯ ಪರೀಕ್ಷೆಯ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸ್ವೀಕರಿಸುವ ಸಂದರ್ಭದಲ್ಲಿ ವಾಣಿಜ್ಯ ಸಂಸ್ಥೆಗಳ ಮುಖ್ಯಸ್ಥರು ತಮ್ಮ ಸಂಸ್ಥೆಯ ಪ್ರಥಮ ಮಾನ್ಯತೆ ಅಥವಾ ಮಾನ್ಯತೆ ನವೀಕರಣ ಪ್ರತಿಯನ್ನು ಹಾಗೂ ಶುಲ್ಕ ಪಾವತಿಸಿದ ಸ್ವೀಕೃತಿಯನ್ನು pdf ನಮೂನೆಯಲ್ಲಿ 1mb ಗಾತ್ರದೊಳಗೆ Upload ಮಾಡಲು ತಿಳಿಸಿದೆ. ಸದರಿ ಮಾಹಿತಿಯನ್ನು ಪರಿಶೀಲಿಸಿ, ಪ್ರಥಮ ಮಾನ್ಯತೆ ಅಥವಾ ಮಾನ್ಯತೆ ನವೀಕರಣ ಪ್ರತಿಯನ್ನು ಆನ್‌ಲೈನ್ ಮೂಲಕ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರ ಲಾಗಿನ್‌ನಲ್ಲಿ ಅನುಮೋದಿಸಲು/ತಿರಸ್ಕರಿಸಲು ಅವಕಾಶ ಕಲ್ಪಿಸಿದೆ.
- ಸಂಸ್ಥೆಗಳ ಪ್ರಥಮ ಮಾನ್ಯತೆ ಅಥವಾ ಮಾನ್ಯತೆ ನವೀಕರಣ ಪ್ರತಿಯನ್ನು ಒದಗಿಸಲಾದ ಲಾಗಿನ್‌ನಲ್ಲಿ ತಿರಸ್ಕರಿಸಿದಲ್ಲಿ Remarks ಕಾಲಂನಲ್ಲಿ ಸಕಾರಣವನ್ನು ಕಡ್ಡಾಯವಾಗಿ ನಮೂದಿಸುವುದು. ತಿರಸ್ಕೃತಗೊಂಡ ವಾಣಿಜ್ಯ ಸಂಸ್ಥೆಯವರು ಸರಿಯಾದ ಮಾಹಿತಿಯನ್ನು ನಿಗದಿತ ಕಾಲಮಿತಿಯೊಳಗೆ ಒದಗಿಸಿದಲ್ಲಿ ಮತ್ತೊಮ್ಮೆ ಅನುಮೋದಿಸಲು ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರ Loginನಲ್ಲಿ ಅವಕಾಶ ಕಲ್ಪಿಸಿದೆ. ಸಂಸ್ಥೆಗಳ ಪ್ರಥಮ ಮಾನ್ಯತೆ ಅಥವಾ ಮಾನ್ಯತೆ ನವೀಕರಣ ಪ್ರತಿಯನ್ನು 24 ಗಂಟೆಗಳೊಳಗಾಗಿ ಕಡ್ಡಾಯವಾಗಿ ಅನುಮೋದಿಸಲು ತಿಳಿಸಿದೆ.
- ಪ್ರಥಮ ಮಾನ್ಯತೆ ಅಥವಾ ಮಾನ್ಯತೆ ನವೀಕರಣ ಪ್ರತಿಯನ್ನು ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರು ಅನುಮೋದಿಸಿದ ನಂತರವಷ್ಟೆ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುತ್ತದೆ. ಹಾಗಾಗಿ ಈ ಬಗ್ಗೆ ಅಗತ್ಯ ಕ್ರಮವಹಿಸುವುದು.

<u>**ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವಾಗ ಸಂಸ್ಥೆಯ ಮುಖ್ಯಸ್ಥರು ಪಾಲಿಸಬೇಕಾದ ಸೂಚನೆಗಳು:-**</u>

- ವಾಣಿಜ್ಯ ಸಂಸ್ಥೆಗಳ ಮುಖ್ಯಸ್ಥರು ತಮ್ಮ ಸಂಸ್ಥೆಯ ಲಾಗಿನ್ ನಲ್ಲಿ ಮಾನ್ಯತೆ ನವೀಕರಣ ಶುಲ್ಕ ರೂ 205/- ಗಳನ್ನು ONLINE ನಲ್ಲಿ ಪಾವತಿ ಮಾಡಿ ರಶೀದಿಯ PRINT ಪಡೆಯಬೇಕು.
- ಸಂಸ್ಥೆಗಳ ಮುಖ್ಯಸ್ಥರು ಮಾನ್ಯತೆ ನವೀಕರಣ ಪ್ರತಿ ಹಾಗೂ ONLINE PAYMENT RECEIPT ಎರಡನ್ನೂ SINGLE PDF(With in 1Mb size) ಮಾಡಿ UPLOAD ಮಾಡಬೇಕು.
- ಜನವರಿ-2024ರ ಮಾಹೆಯಲ್ಲಿ ನಡೆಯುವ ವಾಣಿಜ್ಯ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳ ನೋಂದಣಿ ಮಾಹಿತಿಯನ್ನು ಮಂಡಲಿ ಜಾಲತಾಣದಲ್ಲಿ ಸಂಸ್ಥೆಯ ಲಾಗಿನ್ ಮುಖಾಂತರ ಅಪ್‌ಲೋಡ್ ಮಾಡುವುದು.
- ಪರೀಕ್ಷಾ ಶುಲ್ಕದಿಂದ ವಿನಾಯಿತಿ ಪಡೆಯಲು ಬಯಸುವ ಅಭ್ಯರ್ಥಿಗಳಿಂದ ಕಡ್ಡಾಯವಾಗಿ ನಿಗದಿತ ನಮೂನೆಯಲ್ಲಿ ಜಾತಿ ಪ್ರಮಾಣ ಪತ್ರವನ್ನು ಪಡೆದು, ಅರ್ಜಿಯ ನಿಗದಿತ ಕಾಲಂನಲ್ಲಿ ಪ್ರಮಾಣ ಪತ್ರದ **RD** ಸಂಖ್ಯೆಯನ್ನು ನಮೂದಿಸಬೇಕು. ಒಂದು ವೇಳೆ ಜಾತಿಯನ್ನು ತಪ್ಪಾಗಿ ನಮೂದಿಸಿ ಶುಲ್ಕ ವಿನಾಯಿತಿ ಪಡೆದಲ್ಲಿ ಮುಂದಿನ ಆಗುಹೋಗುಗಳಿಗೆ ಸಂಸ್ಥೆಯ ಮುಖ್ಯಸ್ಥರನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.
- 2002 ಹಾಗೂ ಅದಕ್ಕಿಂತ ಹಿಂದಿನ ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳ ಹಾಗೂ ತತ್ಸಮಾನ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳ ಅಂಕಪಟ್ಟಿಗಳನ್ನು ಪರಿಶೀಲಿಸಿ ಆನ್‌ಲೈನ್‌ನಲ್ಲಿ NON KSEAB OPTION ಬಳಸಿ ಅರ್ಜಿ ಸಲ್ಲಿಸುವಾಗ ಎಲ್ಲಾ ಮಾಹಿತಿಗಳನ್ನು ಸರಿಯಾಗಿ ತುಂಬಬೇಕು.
- 2003 ಹಾಗೂ 2003ರ ನಂತರದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳ ಮಾಹಿತಿಯನ್ನು ಅಪ್‌ಲೋಡ್ ಮಾಡುವಾಗ ಎಸ್.ಎಸ್.ಎಲ್.ಸಿ ನೋಂದಣಿ ಸಂಖ್ಯೆಯನ್ನು ನಮೂದಿಸಿದಾಗ ಮಾಹಿತಿಗಳು AUTO FETCH ಆಗುತ್ತವೆ. ಉಳಿದ ಮಾಹಿತಿಗಳನ್ನು ಸಂಸ್ಥೆಯ ಮುಖ್ಯಸ್ಥರು ಭರ್ತಿ ಮಾಡುವುದು.
- ಜನವರಿ-2024ರ ವಾಣಿಜ್ಯ ಪರೀಕ್ಷೆಗೆ ಅರ್ಜಿಸಲ್ಲಿಸುತ್ತಿರುವ ಎಲ್ಲಾ ಅಭ್ಯರ್ಥಿಗಳು ಮಂಡಲಿಯ ನಿಯಮಾನುಸಾರ ಕನಿಷ್ಠ ಹಾಜರಾತಿ ಹೊಂದಿರುವ ಬಗ್ಗೆ ದೃಢೀಕರಿಸಿಕೊಳ್ಳುವುದು. ಒಂದುವೇಳೆ ಕನಿಷ್ಠ ಹಾಜರಾತಿಗಿಂತ ಕಡಿಮೆ ಹಾಜರಾತಿ ಹೊಂದಿರುವ ಅಭ್ಯರ್ಥಿಗಳಿಗೆ ಪರೀಕ್ಷೆಗೆ ಅರ್ಜಿ ಸಲ್ಲಿಸಿದಲ್ಲಿ ಮುಂದಿನ ಆಗುಹೋಗುಗಳಿಗೆ ಸಂಸ್ಥೆಯ ಪ್ರಾಚಾರ್ಯರೇ ಹೊಣೆಗಾರರಾಗಿರುತ್ತೀರಿ.

- ಅರ್ಜಿಗಳನ್ನು ಸ್ವೀಕರಿಸುವ ಅಂತಿಮ ದಿನಾಂಕದ ನಂತರ ಅರ್ಜಿಯಲ್ಲಿ ಅಭ್ಯರ್ಥಿಗಳ ಮಾಹಿತಿಗಳು ತಿದ್ದುಪಡಿ ಮಾಡಬೇಕಾದಲ್ಲಿ ಮಂಡಲಿ ನಿಗಧಿಪಡಿಸಿದ ಅವಧಿಯಲ್ಲಿ ಮಾತ್ರ ತಿದ್ದುಪಡಿ ಮಾಡಿಕೊಳ್ಳತಕ್ಕದ್ದು.
- ಎಸ್.ಎಸ್.ಎಲ್.ಸಿ. ನೋಂದಣಿ ಸಂಖ್ಯೆ ಮೂಲಕ **AUTO FETCH** ಆದ ಮಾಹಿತಿಗಳನ್ನು ತಿದ್ದುಪಡಿ ಮಾಡಿಕೊಳ್ಳಲು ಅವಕಾಶ ಇರುವುದಿಲ್ಲ. ಇದನ್ನು ಹೊರತುಪಡಿಸಿ ಉಳಿದ ಮಾಹಿತಿಗಳಲ್ಲಿ ತಿದ್ದುಪಡಿಗಳನ್ನು ಅಪೇಕ್ಷಿಸಿದಲ್ಲಿ ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಅಂತಿಮ ದಿನಾಂಕದೊಳಗೆ ಸಂಸ್ಥೆಯ ಲಾಗಿನ್‌ನಲ್ಲಿ ಲಭ್ಯವಿರುವ Update Application ಆಯ್ಕೆ ಬಳಸಿ ತಿದ್ದುಪಡಿ ಮಾಡಿಕೊಳ್ಳಬಹುದಾಗಿದೆ. ಅರ್ಜಿ ಸಲ್ಲಿಸುವ ಅಂತಿಮ ದಿನಾಂಕದ ನಂತರ ಅರ್ಜಿಯಲ್ಲಿನ ಯಾವುದೇ ಮಾಹಿತಿಗಳ ತಿದ್ದುಪಡಿಗೆ ಅವಕಾಶ ಇರುವುದಿಲ್ಲ.
- ಮಂಡಲಿಯ ಗಮನಕ್ಕೆ ತರದೇ ಪರೀಕ್ಷಾ ಕೇಂದ್ರಗಳ ಬದಲಾವಣೆ ಮಾಡಿಕೊಂಡು ಅಭ್ಯರ್ಥಿಗಳನ್ನು ಪರೀಕ್ಷೆಗೆ ಹಾಜರು ಪಡಿಸಿದಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುವುದಿಲ್ಲ. ಇಂತಹ ಪ್ರಕರಣ ಕಂಡುಬಂದಲ್ಲಿ ಸಂಬಂಧಿಸಿದ ಸಂಸ್ಥೆಯ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.
- ಆನ್‌ಲೈನ್‌ನಲ್ಲಿ ಪರೀಕ್ಷಾ ವಿಷಯ ಹಾಗೂ ಪರೀಕ್ಷಾ ಕೇಂದ್ರ ಆಯ್ಕೆ ಮಾಡುವ ಮೊದಲು ಸರಿಯಾಗಿ ಪರಿಶೀಲಿಸಿಕೊಂಡು ಆಯ್ಕೆ ಮಾಡುವುದು. ಒಮ್ಮೆ ಆಯ್ಕೆ ಮಾಡಿದ ನಂತರ ವಿಷಯ ಬದಲಾವಣೆಗೆ ಹಾಗೂ ಕೇಂದ್ರ ಬದಲಾವಣೆಗೆ ಕಡ್ಡಾಯವಾಗಿ ಅವಕಾಶ ಇರುವುದಿಲ್ಲ.
- ಒಂದು ವೇಳೆ ಆಯ್ಕೆ ಮಾಡಲಾದ ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಕೇಂದ್ರ ಸ್ಥಾಪಿಸಲು ಅಗತ್ಯ ಸಂಖ್ಯೆಗಿಂತ ಕಡಿಮೆ ಇದ್ದಲ್ಲಿ ಮಂಡಲಿಯ ಹಂತದಲ್ಲಿ ಸಮೀಪದ ಕೇಂದ್ರಗಳಿಗೆ ವಿಲೀನಗೊಳಿಸಿ ಕೇಂದ್ರವನ್ನು ಬದಲಾಯಿಸಲಾಗುವುದು.
- ಸಂಸ್ಥೆಯ ಮುಖ್ಯಸ್ಥರು ಸಂಸ್ಥೆಯ ಲಾಗಿನ್‌ನಲ್ಲಿ ನಾಮಾಯಾದಿ ಪಟ್ಟಿಯನ್ನು ಡೌನ್‌ಲೋಡ್ ಮಾಡಿಕೊಂಡು ಪರಿಶೀಲಿಸಿ, ಶುಲ್ಕ ಪಾವತಿಸಿದ ರಶೀದಿಯನ್ನು ಸಂಬಂಧಿಸಿದ ಡಯಟ್‌ಗೆ ಸಲ್ಲಿಸುವುದು.
- ಅಭ್ಯರ್ಥಿಗಳು ಅರ್ಜಿಯನ್ನು ನೋಂದಾಯಿಸಿದ ವಾಣಿಜ್ಯ ಸಂಸ್ಥೆಯ ಲಾಗಿನ್‌ಗೆ ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು ಅಪ್‌ಲೋಡ್ ಮಾಡಲಾಗುವುದು. ಪರೀಕ್ಷೆಗೆ ನೋಂದಾಯಿಸಿದ ಅಭ್ಯರ್ಥಿಗಳು ಸದರಿ ವಾಣಿಜ್ಯ ಸಂಸ್ಥೆಯಿಂದಲೇ ಪ್ರವೇಶ ಪತ್ರಗಳನ್ನು ಪಡೆಯುವುದು.

ಮೇಲಿನ ಎಲ್ಲಾ ಸೂಚನೆಗಳನ್ನು ಸಂಬಂಧಪಟ್ಟ ವಾಣಿಜ್ಯ ಸಂಸ್ಥೆಯ ಮುಖ್ಯಸ್ಥರು ತಪ್ಪದೇ ಪಾಲಿಸಲು ತಿಳಿಸಿದೆ. ನಿಯಮಗಳನ್ನು ಪಾಲಿಸದಿದ್ದಲ್ಲಿ ಹಾಗೂ ತಪ್ಪು ಮಾಹಿತಿ/ದಾಖಲೆಗಳನ್ನು ಅಪ್‌ಲೋಡ್ ಮಾಡಿದಲ್ಲಿ ಮುಂದಿನ ತೊಂದರೆಗಳಿಗೆ ಸಂಬಂಧಿಸಿದ ಸಂಸ್ಥೆಯ ಪ್ರಾಚಾರ್ಯರನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

- **<u>ವಿಶೇಷ ಸೂಚನೆ:-</u> ಪರೀಕ್ಷಾ ಅರ್ಜಿಗಳನ್ನು ಮಂಡಲಿಯ ಜಾಲತಾಣದಲ್ಲಿ ಸಂಸ್ಥೆಯ ಲಾಗಿನ್ ಮೂಲಕ ಸಲ್ಲಿಸುವ ಸಮಯದಲ್ಲಿ ವಿದ್ಯಾರ್ಥಿಗಳ ಭಾವಚಿತ್ರ 60 ರಿಂದ 80 KB ಹಾಗೂ ಸಹಿಯನ್ನು 20 ರಿಂದ 50 KB JPEG ನಮೂನೆಯಲ್ಲಿ ಅಪ್‌ಲೋಡ್ ಮಾಡುವುದು.**
- **ಭಾವಚಿತ್ರ ನೇರ ಭಂಗಿಯಲ್ಲಿರಬೇಕು ಹಾಗೂ ಭಾವಚಿತ್ರವನ್ನು ಮಾತ್ರವೇ ಸ್ಕ್ಯಾನ್ ಮಾಡಿಕೊಂಡು ಅಪ್‌ಲೋಡ್ ಮಾಡಬೇಕೆ ಹೊರತು ಇಡೀ ಪೇಪರ್ ಸ್ಕ್ಯಾನ್ ಮಾಡಿ ಅಪಲೋಡ್ ಮಾಡುವಂತಿಲ್ಲ, Photo Background ಕಡ್ಡಾಯವಾಗಿ ಬಿಳಿಬಣ್ಣ ಹೊಂದಿರಬೇಕು.**

**ಜನವರಿ-2024ರ ವಾಣಿಜ್ಯ ಪರೀಕ್ಷೆಗೆ ಈ ಕೆಳಕಂಡ ದಾಖಲೆಗಳನ್ನು ಕಡ್ಡಾಯವಾಗಿ ಸಂಸ್ಥೆಯ ಪ್ರಾಚಾರ್ಯರು, ಸಂಬಂಧಿಸಿದ ಡಯಟ್‌ಗಳಿಗೆ ಸಲ್ಲಿಸುವುದು.**

- ಮುಖಪುಟ (Covering letter).
- ಶುಲ್ಕ ಪಾವತಿಸಿದ ರಶೀದಿ.
- ನಾಮಯಾದಿ ಪಟ್ಟಿ (Nominal Roll).
- ಶಾಲಾ ನವೀಕರಣ ಶುಲ್ಕ ರೂ. 205ಗಳನ್ನು ಆನ್‌ಲೈನ್‌ನಲ್ಲಿ ಪಾವತಿಸಿದ ರಶೀದಿಯ ಮುದ್ರಿತ ಪ್ರತಿ.

ಈ ಮೇಲಿನ ದಾಖಲೆಗಳನ್ನು **ದಿನಾಂಕ:29/12/2023** ರೊಳಗೆ ಸಂಬಂಧಿಸಿದ ಡಯಟ್‌ಗಳಿಗೆ ಸಲ್ಲಿಸುವುದು.

## ಜನವರಿ–2024ರ ಮಾಹೆಯ ವಾಣಿಜ್ಯ ಪರೀಕ್ಷೆಗೆ ಸಂಬಂಧಿಸಿದಂತೆ ಉಪನಿರ್ದೇಶಕರು(ಅಭಿವೃದ್ಧಿ)ರವರ ಜವಾಬ್ದಾರಿಗಳು.

- ಜನವರಿ–2024ರ ಮಾಹೆಯ ವಾಣಿಜ್ಯ ಪರೀಕ್ಷೆಗೆ ಸಂಬಂಧಿಸಿದಂತೆ, ಪ್ರತಿ ಡಯಟ್‌ಗಳಿಗೂ ಲಾಗಿನ್ ನೀಡಲಾಗಿದೆ. ಸಂಬಂಧಪಟ್ಟ ಜಿಲ್ಲೆಯ ವಾಣಿಜ್ಯ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಜನವರಿ–2024ರ ಪರೀಕ್ಷೆಗೆ ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಗಳ ಸಂಸ್ಥೆವಾರು ಮಾಹಿತಿಯನ್ನು ಮಂಡಲಿಯಿಂದ ಡಯಟ್ ಲಾಗಿನ್‌ನಲ್ಲಿ ಲಭ್ಯಗೊಳಿಸಲಾಗುವುದು.
- ವಾಣಿಜ್ಯ ಸಂಸ್ಥೆಯವರು ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸಿದ ಮಾಹಿತಿಗಳನ್ನು ಪರಿಶೀಲಿಸಿ ಡಯಟ್ ಲಾಗಿನ್‌ನಲ್ಲಿ ಅಭ್ಯರ್ಥಿಗಳ ಮಾಹಿತಿಯನ್ನು ಅನುಮೋದಿಸುವುದು ಅಥವಾ ತಿರಸ್ಕರಿಸುವುದು(Aprove/Reject)
- ತಿರಸ್ಕೃತಗೊಂಡ ಅರ್ಜಿಗಳಿಗೆ Remarks ಕಾಲಂನಲ್ಲಿ ಸಕಾರಣವನ್ನು ನಮೂದಿಸುವುದು ಹಾಗೂ ಸರಿಯಾದ ಮಾಹಿತಿಯನ್ನು ಸಂಬಂಧಪಟ್ಟ ಸಂಸ್ಥೆಯವರು ನಿಗದಿತ ಅವಧಿಯಲ್ಲಿ ಒದಗಿಸಿದಲ್ಲಿ ಮತ್ತೊಮ್ಮೆ ಅನುಮೋದಿಸಲು ಡಯಟ್ ಲಾಗಿನ್‌ನಲ್ಲಿ ಅವಕಾಶ ಕಲ್ಪಿಸಿದೆ.
- ವಾಣಿಜ್ಯ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಗುರುತಿಸಿರುವ ಪರೀಕ್ಷಾ ಕೇಂದ್ರಕ್ಕೆ ಅಗತ್ಯ ಮಾನವ ಹಾಗೂ ಭೌತಿಕ ಸಂಪನ್ಮೂಲಗಳನ್ನು ಉಪನಿರ್ದೇಶಕರು(ಅಭಿವೃದ್ಧಿ)ರವರು ಒದಗಿಸುವ ವ್ಯವಸ್ಥೆ ಮಾಡುವುದು.
- ಉಪನಿರ್ದೇಶಕರು(ಅಭಿವೃದ್ಧಿ)ರವರಿಂದ ಡಯಟ್ ಲಾಗಿನ್‌ನಲ್ಲಿ ಅರ್ಜಿಗಳು ಅನುಮೋದನೆಗೊಂಡ ನಂತರ ಅಭ್ಯರ್ಥಿಗಳಿಗೆ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಲಾಗುತ್ತದೆ.

### ಉಪನಿರ್ದೇಶಕರು(ಅಭಿವೃದ್ಧಿ)ರವರು ಅರ್ಜಿಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ ಗಮನಿಸಬೇಕಾದ ಅಂಶಗಳು:

### AUTO FETCH ಆಗಿರುವ ಅರ್ಜಿಗಳು:

ವಾಣಿಜ್ಯ ಸಂಸ್ಥೆಯವರು ಆನ್‌ಲೈನ್‌ನಲ್ಲಿ ಸಲ್ಲಿಸಿರುವ ಅಭ್ಯರ್ಥಿಗಳ ಅರ್ಜಿಗಳನ್ನು ಡಯಟ್ ಲಾಗಿನ್‌ನಲ್ಲಿ ಲಭ್ಯ ಮಾಡಲಾಗುವ ನಾಮಿನಲ್ ರೋಲ್‌ನ Application Type ನಲ್ಲಿ Auto fetch ಎಂದು ನಮೂದಾಗಿರುವ ಮಾಹಿತಿಗಳು ಮಂಡಲಿಯ ಡಾಟಾ ಬೇಸ್‌ನಿಂದ ಪಡೆಯಲಾಗಿರುತ್ತದೆ. ಡಯಟ್ ಹಂತದಲ್ಲಿ ಈ ಮಾಹಿತಿಗಳನ್ನು ಹೊರತುಪಡಿಸಿ ಕೆಳಕಂಡ ಮಾಹಿತಿಗಳನ್ನು ಪರಿಶೀಲಿಸಿ ಡಯಟ್ ಲಾಗಿನ್‌ನಲ್ಲಿ Aprove/Reject ಮಾಡಬಹುದಾಗಿದೆ.

- ಅಭ್ಯರ್ಥಿಯ ಅರ್ಜಿಯ ಮುದ್ರಿತ ಪ್ರತಿ
- ಪರಿಶಿಷ್ಟ ಜಾತಿ/ಪಂಗಡದ ಅಭ್ಯರ್ಥಿಗಳಾಗಿದ್ದಲ್ಲಿ ಜಾತಿ ಪ್ರಮಾಣಪತ್ರದ RD ಸಂಖ್ಯೆಯನ್ನು ಪರಿಶೀಲಿಸುವುದು.
- ಆನ್‌ಲೈನ್‌ನಲ್ಲಿ ಶುಲ್ಕ ಪಾವತಿಸಿದ ರಶೀದಿ
- AUTO FETCH ಆಗದ ಮಾಹಿತಿಗಳನ್ನು ಕೂಲಂಕುಶವಾಗಿ ಪರಿಶೀಲಿಸಬೇಕು.

### AUTO FETCH ಆಗದೇ ಪೂರ್ಣ ಮಾಹಿತಿಗಳನ್ನು ಭರ್ತಿ ಮಾಡಿ ಸಲ್ಲಿಸಿರುವ ಅರ್ಜಿಗಳು:

- ಡಯಟ್ ಲಾಗಿನ್‌ನಲ್ಲಿ ಲಭ್ಯ ಮಾಡಲಾಗುವ ನಾಮಿನಲ್ ರೋಲ್‌ನ APPLICATION TYPE ನಲ್ಲಿ NON AUTO FETCH ಎಂದು ನಮೂದಿತವಾಗಿರುವ ಅರ್ಜಿಗಳ ಮಾಹಿತಿಗಳನ್ನು ಮಂಡಲಿಯ ಡಾಟಾಬೇಸ್‌ನಿಂದ ಪಡೆಯಲಾಗಿರುವುದಿಲ್ಲ. ಇವುಗಳನ್ನು ಸಂಸ್ಥೆಗಳ ಮುಖ್ಯಸ್ಥರು ದಾಖಲೆಗಳನ್ನು ಆಧರಿಸಿ ಭರ್ತಿ ಮಾಡಿರುತ್ತಾರೆ. ಇಂತಹ ಅರ್ಜಿಗಳನ್ನು ಅನುಮೋದಿಸುವಾಗ ಸರಿಯಾಗಿ ಪರಿಶೀಲಿಸಿ ಡಯಟ್ ಲಾಗಿನ್‌ನಲ್ಲಿ APROVE/REJECT ಮಾಡಬಹುದಾಗಿದೆ.
- ಪರೀಕ್ಷೆಗೆ ಸಂಬಂಧಿಸಿದಂತೆ ವಿದ್ಯಾರ್ಹತೆಯ ಪ್ರಮಾಣ ಪತ್ರಗಳನ್ನು ಪರಿಶೀಲಿಸಿ ಈ ಬಗ್ಗೆ ಸಂಬಂಧಿಸಿದ ವಾಣಿಜ್ಯ ಸಂಸ್ಥೆಯ ಪ್ರಾಚಾರ್ಯರಿಂದ ದೃಢೀಕರಿಸಿದ ನಕಲು ಪ್ರತಿಯನ್ನು ಪಡೆಯುವುದು.
- ಪರಿಶಿಷ್ಟ ಜಾತಿ/ಪಂಗಡ ಅಭ್ಯರ್ಥಿಗಳಾಗಿದ್ದಲ್ಲಿ ಜಾತಿ ಪ್ರಮಾಣ ಪತ್ರದ RD ಸಂಖ್ಯೆಯನ್ನು ಪರಿಶೀಲಿಸುವುದು.
- ಆನ್‌ಲೈನ್ ಮೂಲಕ ಪಾವತಿಸಿದ ಶುಲ್ಕ ರಶೀದಿ.

- ಮುದ್ರಣ ಪರೀಕ್ಷೆಗಳನ್ನು ಸರ್ಕಾರಿ ಮುದ್ರಣಾಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಭ್ಯರ್ಥಿಗಳಿಗಾಗಿ ಮಾತ್ರ ನಡೆಸಲಾಗುತ್ತಿದೆ. ಈ ಬಗ್ಗೆ ಪರಿಶೀಲಿಸಿ ಅನುಮೋದನೆ ನೀಡುವುದು.
- ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಮಂಡಲಿಯಿಂದ ಪಡೆದಿರುವ ಅನುಮತಿ ಪತ್ರ.
- ಖಾಸಗಿ ಅಭ್ಯರ್ಥಿಗಳಾಗಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಮಂಡಲಿಯಿಂದ ಪಡೆದಿರುವ ಅನುಮತಿ ಪತ್ರ.
- ಒಂದು ವೇಳೆ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಿದಲ್ಲಿ ಸಕಾರಣವನ್ನು ಷರಾ(Remarks) ಕಾಲಂನಲ್ಲಿ ತಪ್ಪದೇ ನಮೂದಿಸುವುದು.

ಜನವರಿ-2024ರ ವಾಣಿಜ್ಯ ಪರೀಕ್ಷೆಗೆ ಸಂಸ್ಥೆಗಳ ಪ್ರಾಚಾರ್ಯರು ಸಲ್ಲಿಸಿದ ದಾಖಲೆಗಳನ್ನು ಡಯಟ್ ಸಂಸ್ಥೆಯವರು ಖುದ್ದಾಗಿ ಅಥವಾ ರಿಜಿಸ್ಟರ್ಡ್ ಅಂಚೆ ಮೂಲಕ ಈ ಮುಂದಿನ ವಿಳಾಸಕ್ಕೆ **ದಿನಾಂಕ:30/12/2023** ರೊಳಗಾಗಿ ತಲುಪಿಸುವುದು.

ಸಹಾಯಕ ನಿರ್ದೇಶಕರು,
ವಾಣಿಜ್ಯ ಶಾಖೆ, 4ನೇ ಮಹಡಿ,
ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,
6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003
ಮಂಡಲಿಯ ದೂರವಾಣಿ ಸಂಖ್ಯೆ:**080-23310075/76**
ಶಾಖೆಯ Email ವಿಳಾಸ: **adpisvsection@gmail.com**

| |
|---|
| ಹೆಚ್ಚಿನ ವಿವರಗಳಿಗಾಗಿ ಮಂಡಲಿಯ ಈ ಕೆಳಕಂಡ ಜಾಲತಾಣವನ್ನು ನೋಡುವುದು. |
| **https://kseab.karnataka.gov.in** |

**ಸೂಚನೆ:- ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಪ್ರಕ್ರಿಯೆಗೆ ಸಂಬಂಧಿಸಿದಂತೆ Flow chart ಅನ್ನು ಸಂಸ್ಥೆಯ ಲಾಗಿನ್‌ನಲ್ಲಿ ಲಭ್ಯ ಮಾಡಲಾಗುವುದು. ಅದರಂತೆ ಕ್ರಮವಹಿಸಿ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವುದು.**

(ಗೋಪಾಲಕೃಷ್ಣ.ಹೆಚ್.ಎನ್.)
ನಿರ್ದೇಶಕರು(ಪರೀಕ್ಷೆಗಳು)

<u>ಪ್ರತಿಯನ್ನು:-</u>

1. ವಿಭಾಗೀಯ ಸಹನಿರ್ದೇಶಕರು, ಸಾ.ಶಿ.ಇಲಾಖೆ, ಬೆಂಗಳೂರು, ಮೈಸೂರು, ಬೆಳಗಾಂ ಮತ್ತು ಕಲಬುರಗಿ ರವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಜಿಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ, ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ನೋಡಲ್ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ (ಡಯಟ್ ಪ್ರಾಂಶುಪಾಲರ ಮೂಲಕ)
4. ಕಛೇರಿ ಪ್ರತಿ.

KARNATAKA EXAMINATION AND ASSESSMENT BOARD

6th Cross, Malleswaram, Bengaluru – 560 003

FLOW CHART-2

**FLOW CHART FOR ONLINE APPLICATION FOR COMMERCE EXAMINATION JANUARY-2024**

**https://kseab.karnataka.gov.in/**

Click on OTHER EXAMS PORTAL

↓

Click on Commerce Education Examination

↓

Enter user ID and Password

↓

Login

↓

Click on Commerce Exam Application

↓

Select the Exam

↓

Enter Qualified Exam Registered Registration Number

↓

Click on **View**

↓

Sl no 1-8 will be Auto fetched

( For NON-KSEAB students all fields should be entered)

↓

Select Category

↓

Enter Students /Parents Mobile Number

↓

Upload the Candidate Photo (60-80kb in jpeg format)

↓

Upload the Candidate Signature (20-50kb in jpeg format)

↓

**Save and get Application number**

↓

**Click on Print**

KARNATAKA EXAMINATION AND ASSESSMENT BOARD
6th Cross, Malleswaram, Bengaluru – 560 003

FLOW CHART-1

**FLOW CHART FOR UPLOADING RR COPY AND SCHOOL CODE RENEWAL PAYMENT FOR COMMERCE EXAMINATION JANUARY-2024**

**https://kseab.karnataka.gov.in/**

↓

Click on Other Exams Portal

↓

Click on Commerce Education Examination

↓

Enter User ID (Institute Code)

↓

Enter Password

↓

Login

↓

Make payment

↓

Upload RR Copy

↓

You will get message to your registered mobile number

| Please wait for RR copy approval by Division JD for further steps. This process may take 24 hours. |
|---|

↓

If RR copy is approved, you will get message as

| Your RR copy is approved by Division JD. Now you can Register candidates for Commerce Examination JULY-2024 |
|---|

If RR Copy is rejected you will get message as

| Your RR copy is rejected by Division JD. Please contact Section Officer, Commerce Examination section. |
|---|

- **Take a print copy of application for your reference.**
- **You can get Nominal Roll of your candidates by clicking on Nominal Roll.**